**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 14.11.2022.</u>**

**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ.ಎನ್.ಪಿ. ವಕೀಲರಿಂದಃ</u>**

6. ಸರ್ವೆ ನಂ.210 ಪ್ರತಿವಾದಿ 2 ರವರು ಖರೀದಿಸಿದ 1 ಎಕರೆ 2 ಗುಂಟೆ ಆಸ್ತಿಯನ್ನು ಮಾತ್ರ ಈ ದಾವೆಯಲ್ಲಿ ಸಲ್ಲಿಸಿದ್ದೇನೆ ಎಂದರೆ ನಿಜ. ಸದರಿ ಸರ್ವೆ ನಂ. 210 ರಲ್ಲಿ 1 ಎಕರೆ 2 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಸಹ ಇದೆ. ಸದರಿ ಆಸ್ತಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಸರ್ವೆ ನಂ.55 ವಿ. 1 ಎಕರೆ 15 ಗುಂಟೆ ಇದೆ. ಸರ್ವೆ ನಂ.55 ನಮ್ಮ ಚಿಕ್ಕಪ್ಪನವರ ಹೆಸರಿನಲ್ಲಿ ಸಹ ಜಂಟಿಯಾಗಿ ಇದೆ. ಆದರೆ ನಮ್ಮ ಚಿಕ್ಕಪ್ಪನವರು ಸದರಿ ಸರ್ವೆ ನಂ.55 ಜಮೀನಿಗೆ ಸಂಬಂಧ ಇಲ್ಲ ಎಂದರೆ ನಿಜ. ಸರ್ವೆ ನಂ.55 ರಲ್ಲಿ ನಿಮ್ಮ ಮನೆ ಇದೆ ಎಂದು ಒಂದು ಫೋಟೋ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಫೊಟೋವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ಕಾಣುತ್ತಿರುವ ಮನೆಯನ್ನು ನಾವೆ ಕಟ್ಟಿದ್ದೇವೆ. ಸುಮಾರು 6-7 ಲಕ್ಷ ಖರ್ಚು ಮಾಡಿ ಕಟ್ಟಿದ್ದೇವೆ. ಖರ್ಚು ಮಾಡಿದ ಬಗ್ಗೆ ಪೂರಾವೆ ಇದೆ. ನಾನು ನನ್ನ ಬಳಿ ಇದ್ದ ಹಣವನ್ನು ಹಾಗೂ ಸ್ವಲ್ಪ ಜನರ ಕಡೆಯಿಂದ ಸಾಲವನ್ನು ಪಡೆದು ಮನೆ ಕಟ್ಟಲು ಖರ್ಚು ಮಾಡಿದ್ದೇನೆ. ನನ್ನ ಬಳಿ 2 ಲಕ್ಷ ಹಣ ಇತ್ತು. ಸದರಿ ಹಣ ಎಂಜಿ ಬ್ಯಾಂಕಿನಲ್ಲಿ ಇಟ್ಟಿದ್ದೆ. ಊರಿನ ಜನರ ಕಡೆಯಿಂದ ಹಾಗೂ ನನ್ನ ಸ್ನೇಹಿತರಿಂದ ಸಾಲವನ್ನು ಪಡೆದಿದ್ದೆ. ಸುಮಾರು 5-6 ಜನರು ಅಂದರೆ ನನ್ನ ತಂಗಿ ಗೋದವ್ವಾರವರಿಂದ 1 ಲಕ್ಷ ಪಡೆದಿದ್ದೆ. ನನ್ನ ಇನ್ನೊಬ್ಬ ತಂಗಿ ಮಲ್ಲವ್ವಾರವರಿಂದ 2 ಲಕ್ಷ ಸಾಲ ಪಡೆದಿದ್ದೆ. ನನಗೆ ಅವರು ನಗದು ಹಣ ಕೊಟ್ಟಿದ್ದರು. ಶಿವಪ್ಪಾ ನಂದಿಹಳ್ಳಿ ರವರಿಂದ 1

ಲಕ್ಷ ಹಣ ಸಾಲ ಪಡೆದಿದ್ದೆ. ಬಾಬು ಬಡಸ್ಕರ ರವರಿಂದ 1 ಲಕ್ಷ ಸಾಲ ಪಡೆದಿದ್ದೆ. ಎಲ್ಲರು ನಗದು ಹಣವನ್ನು ಕೊಟ್ಟಿದ್ದಾರೆ. ಅವರುಗಳ ಸಾಕ್ಷಿಯನ್ನು ಮಾಡಿಸಿಸುತ್ತೇನೆ. ನಿಡಿ1 ರಲ್ಲಿ ಕಾಣುತ್ತಿರುವ ಮನೆಯಲ್ಲಿ ನಾನು ವಾಸ ಇದ್ದೇನೆ. ನನ್ನ ಆಧಾರ ಕಾರ್ಡ , ಪಡಿತರ ಚೀಟಿ ನಿಡಿ1 ರಲ್ಲಿ ಕಾಣುತ್ತಿರುವ ಮನೆಯ ವಿಳಾಸಕ್ಕೆ ಇದೆ. ಸದರಿ ಮನೆಗೆ ನಂಬರ ಕೊಟ್ಟಿಲ್ಲ. ಪಂಚಾಯತಿಯಲ್ಲಿ ನನ್ನ ಹೆಸರಿಗೆ ಸದರಿ ಮನೆ ದಾಖಲು ಆಗಿದೆ. ಊರಿನಲ್ಲಿ ಒಂದು ಹಳೆ ಮನೆ ಹಾಗೂ ಖುಲ್ಲಾ ಜಾಗ ಇದೆ. ಸದರಿ ಆಸ್ತಿಗಳ ನಂಬರ 20 ಮತ್ತು 149 ಇದೆ ಎಂದರೆ ಇರಬಹುದು. ಖುಲ್ಲಾ ಜಾಗೆಯ ವಿಸ್ತೀರ್ಣ ನನಗೆ ಗೋತ್ತಿಲ್ಲ. ಅಂದಾಜು ಸಹ ಗೋತ್ತಿಲ್ಲ. ಮನೆಯ ವಿಸ್ತೀರ್ಣ ಗೋತ್ತಿಲ್ಲ. ಸದರಿ ಮನೆಯಲ್ಲಿ ಪ್ರತಿವಾದಿ 5 ವಾಸ ಇದ್ದಾರೆ ಎಂದರೆ ನಿಜ. ಸದರಿ ಹಳೆ ಮನೆ ಹಾಗೂ ಖುಲ್ಲಾ ಜಾಗೆಯ ಬಗ್ಗೆ ನಮ್ಮ ವಕೀಲರಿಗೆ ನಾವು ಮಾಹಿತಿ ಕೊಟ್ಟಿಲ್ಲ. ನನ್ನ ಮನೆಯ ಬಗ್ಗೆ ಸಹ ಮಾಹಿತಿ ಕೊಟ್ಟಿಲ್ಲ.

7. ಪ್ರತಿವಾದಿ 3 ನನ್ನ ಸಹೋದರನ ಹೆಸರಿನಲ್ಲಿ ಹುಬ್ಬಳ್ಳಿಯಲ್ಲಿ ಸಿಟಿಎಸ ನಂ.125 ಆಸ್ತಿ ಇದೆ ಎಂದರೆ ನನಗೆ ಗೋತ್ತಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ನಮ್ಮ ಕುಟುಂಬದ ಎಲ್ಲಾ ಸದಸ್ಯರ ಹೆಸರಿನಲ್ಲಿ ಇರುವ ಆಸ್ತಿಗಳ ಕುರಿತು ಚೌಕಾಶಿ ಮಾಡಿದ್ದೇವು. ಕಸಮಳಗಿ ಗ್ರಾಮದ ಮನೆ ಆ ಸಮಯದಲ್ಲಿ ಕಟ್ಟಿರಲಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ 3 ನನ್ನ ಸಹೋದರನ ಹೆಸರಿನಲ್ಲಿ ಹಳೆ ಬಸ್ಸು ನಿಲ್ದಾಣ ಹುಬ್ಬಳ್ಳಿಯಲ್ಲಿ ಒಂದು ಮನೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರ ಹೆಸರಿನಲ್ಲಿ ಒಂದು ಮನೆ ಇದೆ. ಸದರಿ ಮನೆಯ ನಂಬರ ಹೇಳಲು ಬರುವುದಿಲ್ಲ. ಪ್ರತಿವಾದಿ 3 ರವರು ಖುಲ್ಲಾ ಜಾಗೆ ಖರೀದಿಸಿ ಮನೆಯನ್ನು ಕಟ್ಟಿದ್ದಾರೆ ಎಂದರೆ ನಿಜ. ಪ್ರತಿವಾದಿ 3 ರವರು ಸದರಿ ಮನೆಯಲ್ಲಿ ಸುಮಾರು 20 ವರ್ಷಗಳಿಂದ ವಾಸ

ಇದ್ದಾರೆ ಎಂದರೆ ನಿಜ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿ 3 ರವರ ಹೆಸರಿನಲ್ಲಿ ಎರಡು ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರಿಗೆ ಸದರಿ ಮನೆ ಖರೀದಿಸಲು ಹಾಗೂ ಕಟ್ಟಲು ನಾವು ಹಣವನ್ನು ಕೊಟ್ಟಿಲ್ಲ ಅದೇ ಕಾರಣದಿಂದ ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿ 3 ರವರು ಎಲ್ಲಿಂದ ಹಣ ತಂದು ಅದನ್ನು ಖರೀದಿ ಮಾಡಿದ್ದಾರೆ ಹಾಗೂ ಕಟ್ಟಿಸಿದ್ದಾರೆ ನನಗೆ ಗೋತ್ತಿಲ್ಲ. ನನಗೆ ಸದರಿ ವಿಚಾರ ಗೋತ್ತಿದ್ದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾನು ಬೇರೆಯವರಿಂದ ಸಾಲ ಪಡೆದು ಮನೆ ಕಟ್ಟಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

8. ನಾನು ಬಾಳಪ್ಪಾ ಕಂಬಾರ, ಈರಪ್ಪಾ ಬಡಸ್ಕರ, ಪರಶುರಾಮ ಬಡಸ್ಕರಹಾಗೂ ವಿಠ್ಠಲ ದೇವಲಕರ ರವರ ಜಮೀನುಗಳನ್ನು ಪಾಲಿಗೆ ಮಾಡುತ್ತಿದ್ದೆ ಎಂದು ಹೇಳಲು ಅವರ ಜಮೀನುಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ನಾನು ಬಾಳಪ್ಪಾ ಕಂಬಾರ, ಈರಪ್ಪಾ ಬಡಸ್ಕರ, ಪರಶುರಾಮ ಬಡಸ್ಕರಹಾಗೂ ವಿಠ್ಠಲ ದೇವಲಕರ ರವರ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಬಾಳಪ್ಪಾ ಕಂಬಾರ ರವರ 4 ಎಕರೆ ಜಮೀನು ಲಾವನಿ ಮಾಡಲು ಪಡೆದಿದ್ದೆ. ಪರಶರಾಮ ಬಡಸ್ಕರ ರವರ 1 ಎಕರೆ ಜಮೀನು ಲಾವನಿ ಮಾಡಲು ಪಡೆದಿದ್ದೆ. ವಿಠ್ಠಲ ದೇವಲಕರ ರವರ 2 ಎಕರೆ ಜಮೀನು ಲಾವನಿ ಮಾಡಲು ಪಡೆದಿದ್ದೆ. ಸದರಿ ಜಮೀನುಗಳನ್ನು ನಾನು ಸುಮಾರು 20 ವರ್ಷ ಲಾವನಿ ಮಾಡಿದ್ದೇನೆ. ಲಾವನಿ ಮಾಡಲು ಯಾವುದೇ ಕಾಗದ ಪತ್ರ ಮಾಡಿಕೊಂಡಿರಲಿಲ್ಲ. ಲಾವನಿ ಮಾಡಲು ಜಮೀನುಗಳನ್ನು ಪಡೆದ ಬಗ್ಗೆ ನಿಮ್ಮ ಬಳಿ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಎರಡು ಜಮೀನುಗಳು

ದಾಖಲೆಗಳು ಇವೆ ಹಾಗೂ ಬಾಕಿ ಜಮೀನುಗಳ ದಾಖಲೆ ನನ್ನ ಅಣ್ಣ ಪ್ರತಿವಾದಿ 2 ರವರ ಬಳಿ ಇದೆ. ನಾನು ಸದರಿ ಜಮೀನುಗಳ ಲಾವನಿಯಿಂದ ಬಂದ ಅದಾಯವನ್ನು ಪ್ರತಿವಾದಿ 2 ರವರಿಗೆ ಕೊಡುತ್ತಿದ್ದ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾವು ಲಾವನಿ ಮಾಡಲು ಬಾಳಪ್ಪಾ ಕಂಬಾರ, ಈರಪ್ಪಾ ಬಡಸ್ಕರ, ಪರಶುರಾಮ ಬಡಸ್ಕರಹಾಗೂ ವಿಠ್ಠಲ ದೇವಲಕರ ರವರ ಜಮೀನುಗಳನ್ನು ಪಾಲಿಗೆ ಪಡೆದಿದ್ದೆ ಹಾಗೂ ಅದರಿಂದ ನಮಗೆ ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**